# ಸಮಾಜ ಕಲ್ಯಾಣ ಇಲಾಖೆ

## ಕರ್ನಾಟಕರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ

ಬೆಂಗಳೂರು

# ಕರ್ನಾಟಕ ರಾಜ್ಯಾದ್ಯಂತ ಪೌರ ಕಾರ್ಮಿಕರ/ಸ್ವಚ್ಛತಾ ಕೆಲಸಗಾರರು ಏಕರೂಪ ಸುರಕ್ಷತಾ ಪರಿಕರಗಳನ್ನು ಉಪಯೋಗಿಸುವ ಸಂಬಂಧ ಸುರಕ್ಷತಾ ಪರಿಕರಗಳ ದೃಢೀಕರಣ ಸಮಿತಿಯು ಒರಿಸ್ಸಾ ರಾಜ್ಯದಲ್ಲಿ ಅಳವಡಿಸಿಕೊಂಡಿರುವ ಸುರಕ್ಷತಾ ಪರಿಕರಗಳ ಸೌಲಭ್ಯಗಳ ಕುರಿತ

# ಅಧ್ಯಯನದ ವರದಿ

**ದಿನಾಂಕ : 06-04-2022 ರಿಂದ 08-04-2022ರ ವರೆಗೆ**

**ಒಡಿಸ್ಸಾ ರಾಜ್ಯದ ಭುವನೇಶ್ವರ್, ಪುರಿ ಹಾಗೂ ಕಟಕ್ ಜಿಲ್ಲೆಗಳಿಗೆ ಅಧ್ಯಯನ ತಂಡವು ಭೇಟಿ ನೀಡಿರುತ್ತದೆ**



ಯಂತ್ರವನ್ನು ಬಳಸಿರಿ

ಮನುಷ್ಯರನ್ನು ಮ್ಯಾನ್ ಹೋಲ್‌ಗೆ ಇಳಿಸುವುದು ಅಪರಾಧ



# ಸಮಾಜ ಕಲ್ಯಾಣ ಇಲಾಖೆ

## ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ

ಬೆಂಗಳೂರು

## ಕರ್ನಾಟಕ ರಾಜ್ಯಾದ್ಯಂತ ಪೌರ ಕಾರ್ಮಿಕರ/ಸ್ವಚ್ಛತಾ ಕೆಲಸಗಾರರು ಏಕರೂಪ ಸುರಕ್ಷತಾ ಪರಿಕರಗಳನ್ನು ಉಪಯೋಗಿಸುವ ಸಂಬಂಧ ಸುರಕ್ಷತಾ ಪರಿಕರಗಳ ದೃಢೀಕರಣ ಸಮಿತಿಯು ಒರಿಸ್ಸಾ ರಾಜ್ಯದಲ್ಲಿ ಅಳವಡಿಸಿಕೊಂಡಿರುವ ಸುರಕ್ಷತಾ ಪರಿಕರಗಳ ಸೌಲಭ್ಯಗಳ ಕುರಿತ

# ಅಧ್ಯಯನದ ವರದಿ

**ದಿನಾಂಕ : 06-04-2022 ರಿಂದ 08-04-2022ರ ವರೆಗೆ**

**ಒಡಿಸ್ಸಾ ರಾಜ್ಯದ ಭುವನೇಶ್ವರ್, ಪುರಿ ಹಾಗೂ ಕಟಕ್**

**ಜಿಲ್ಲೆಗಳಿಗೆ ಅಧ್ಯಯನ ತಂಡವು ಭೇಟಿ ನೀಡಿರುತ್ತದೆ**

# ಕರ್ನಾಟಕ ರಾಜ್ಯಾದ್ಯಂತ ಪೌರಕಾರ್ಮಿಕರ /ಸ್ವಚ್ಛತಾ ಕೆಲಸಗಾರರು ಏಕರೂಪ ಸುರಕ್ಷತಾ, ಪರಿಕರಗಳನ್ನು ಉಪಯೋಗಿಸುವ ಸಂಬಂಧ ಸುರಕ್ಷತಾ ಪರಿಕರಗಳ ದೃಢೀಕರಣ ಸಮಿತಿಯು ಒರಿಸ್ಸಾ ರಾಜ್ಯಕ್ಕೆ ದಿನಾಂಕ:06.04.2022 ರಿಂದ 08.04.2022 ರವರೆಗೆ ಭೇಟಿ ನೀಡಿ ನಡೆಸಿದ ಅಧ್ಯಯನದ ವರದಿ

ರಾಜ್ಯದ ಹಲವು ಜಿಲ್ಲೆಗಳಿಗೆ ಆಯೋಗವು ಭೇಟಿ ನೀಡಿ ಪರಿಶೀಲನೆ ನಡೆಸಿದಾಗ, ನಗರ ಸ್ಥಳೀಯ ಸಂಸ್ಥೆಗಳು, ಆಸ್ಪತ್ರೆ, ಬಸ್‌ಸ್ಟ್ಯಾಂಡ್‌ಗಳಲ್ಲಿ ಸುರಕ್ಷತಾ ಪರಿಕರಗಳಿಲ್ಲದೆ ಸ್ವಚ್ಛತಾ ಕಾರ್ಮಿಕರು ಕಾರ್ಯನಿರ್ವಹಿಸುತ್ತಿರುತ್ತಾರೆ. ಕಾರ್ಮಿಕರ ಬಳಿ ಖುದ್ದಾಗಿ ಈ ಬಗ್ಗೆ ವಿಚಾರಣೆ ನಡೆಸಿದಾಗ ಸುರಕ್ಷತಾ ಪರಿಕರಗಳನ್ನು ಸಂಬಂಧಪಟ್ಟ ಇಲಾಖೆಯು ನೀಡಿರುತ್ತಾರೆ. ಅವು ಕಾರ್ಮಿಕರ ಅಳತೆಗೆ ಅನುಗುಣವಾಗಿ ಇಲ್ಲದ ಕಾರಣ ಅವುಗಳನ್ನು ಧರಿಸಿ ಕಾರ್ಯನಿರ್ವಹಿಸಲು ಅನಾನುಕೂಲವಾಗುತ್ತದೆ. ಒಂದು ವೇಳೆ ಪರಿಕರಗಳನ್ನು ಧರಿಸಿದಲ್ಲಿ ಅವುಗಳಿಂದ ಚರ್ಮ ಸಂಬಂಧಿತ ಖಾಯಿಲೆಗಳು ಉಂಟಾಗುತ್ತವೆ ಎಂದು ತಿಳಿಸಿರುತ್ತಾರೆ. ಅಲ್ಲದೆ, ಕೆಲವೊಂದು ಕಡೆಗಳಲ್ಲಿ ವರ್ಷಕ್ಕೊಮ್ಮೆ ಪರಿಕರಗಳನ್ನು ನೀಡುತ್ತಿದ್ದು, ಅವುಗಳು ಒಂದು ತಿಂಗಳ ಒಳಗಾಗಿ ಹಾಳಾಗುತ್ತವೆ ಎಂದು ತಿಳಿಸಿರುತ್ತಾರೆ. ಹಲವು ಕಡೆಗಳಲ್ಲಿ ಸುರಕ್ಷತಾ ಪರಿಕರಗಳನ್ನು ನೀಡದೇ ಇರುವುದು ಸಹ ಆಯೋಗದ ಗಮನಕ್ಕೆ ಕಂಡುಬಂದಿರುತ್ತದೆ.

ಆಯೋಗವು ಸಫಾಯಿ ಕರ್ಮಚಾರಿಗಳ ಸ್ಥಿತಿಗತಿಗಳ ಬಗ್ಗೆ ಅರಿಯಲು ರಾಷ್ಟ್ರೀಯ ಕಾನೂನು ಶಾಲೆ ರವರಿಂದ ಅಧ್ಯಯನವನ್ನು ಕೈಗೊಂಡಿದ್ದು, ವರದಿಯಲ್ಲಿ ಪರಿಕರಗಳನ್ನು ಧರಿಸದೇ ಇರುವುದರಿಂದ ಅವರಿಗೆ ಚರ್ಮ ಸಂಬಂಧಿತ ಖಾಯಿಲೆ, ಕ್ಯಾನ್ಸರ್, ಆಸ್ತಮಾ, ಉಸಿರಾಟದ ತೊಂದರೆ, ಹೆಣ್ಣುಮಕ್ಕಳಿಗೆ ಗರ್ಭ ಸಂಬಂಧಿತ ಖಾಯಿಲೆ ಇನ್ನೂ ಹಲವು ಮಾರಣಾಂತಿಕ ಖಾಯಿಲೆಗಳಿಗೆ ತುತ್ತಾಗಿ 35 ರಿಂದ 40 ವರ್ಷದ ಒಳಗಾಗಿ ಮೃತಪಡುತ್ತಿರುವ ಪ್ರಕರಣಗಳು ಹೆಚ್ಚಾಗಿರುತ್ತವೆ. ಇದರಿಂದಾಗಿ, ಅವರ ಮಕ್ಕಳು ಕುಟುಂಬ ನಿರ್ವಹಣೆಗಾಗಿ ವಂಶಪಾರಂಪರ್ಯವಾಗಿ ಇದೇ ವೃತ್ತಿಯನ್ನು ಅವಲಂಬಿಸಿರುತ್ತಾರೆ ಎಂದು ಅಧ್ಯಯನ ವರದಿಯಲ್ಲಿ ಉಲ್ಲೇಖಿಸಿರುತ್ತಾರೆ. ಆದ್ದರಿಂದ, ರಾಜ್ಯಾದ್ಯಂತ ಪೌರಕಾರ್ಮಿಕರು/ಸ್ವಚ್ಚತಾ ಕೆಲಸಗಾರರಿಗೆ ಏಕರೂಪ ಸುರಕ್ಷತಾ ಪರಿಕರಗಳನ್ನು ನೀಡುವ ಬಗ್ಗೆ ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಲು ಆಯೋಗದ ಮಾನ್ಯ ಅಧ್ಯಕ್ಷರು ವ್ಯಕ್ತಪಡಿಸಿದ ಅಭಿಪ್ರಾಯದಂತೆ ದಿನಾಂಕ:22.09.2021 ರಂದು ಸರ್ಕಾರದಕ್ಕೆ ಶಿಫಾರಸ್ಸನ್ನು ಕಳುಹಿಸಲಾಗಿರುತ್ತದೆ.

ಸರ್ಕಾರವು ಆಯೋಗದ ಶಿಫಾರಸ್ಸನ್ನು ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ:ಸಕಇ 501 ಎಸ್‌ಡಿಸಿ 2021., ದಿನಾಂಕ:30.12.2021 ರಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು/ವೈದ್ಯರು/ ಪ್ರಾಂಶುಪಾಲರು ಹಾಗೂ ಎನ್‌ಜಿಓ ಪೌರಕಾರ್ಮಿಕರನ್ನೊಳಗೊಂಡಂತೆ ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಿರುತ್ತದೆ.

ಸಮಿತಿಯು ವಿವಿಧ ದಿನಾಂಕಗಳಂದು ಪೌರಕಾರ್ಮಿಕರು ಉಪಯೋಗಿಸುವಂತಹ ಸುರಕ್ಷತಾ ಪರಿಕರಗಳ ಬಗ್ಗೆ ಹಲವು ಸಭೆಗಳನ್ನು ನಡೆಸಿರುತ್ತದೆ. ಸದರಿ ಸಭೆಯಲ್ಲಿ ಸಮಿತಿ ಸದಸ್ಯರು ಒಡಿಸ್ಸಾ ರಾಜ್ಯವು "**ಗರೀಮಾ ಯೋಜನೆ**"ಯಲ್ಲಿ ಉತ್ತಮ ರೀತಿಯ ಪರಿಕರಗಳನ್ನು ನೀಡಲಾಗುತ್ತಿದ್ದು, ಅದರ ಉಪಯೋಗದ ಬಗ್ಗೆ ಅಧ್ಯಯನ ನಡೆಸಿ ಸಲ್ಲಿಸಿದ ವರದಿಯನ್ನು ಒಡಿಸ್ಸಾ ಸರ್ಕಾರವು ಒಪ್ಪಿ ಅದೇ ಮಾದರಿಯಲ್ಲಿ ಅನುಷ್ಠಾನಗೊಳಿಸುತ್ತಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಮಾನ್ಯ ಅಧ್ಯಕ್ಷರು, ಸಮಿತಿಯ ಸದಸ್ಯರನ್ನೊಳಗೊಂಡಂತೆ ಒಡಿಸ್ಸಾ ರಾಜ್ಯಕ್ಕೆ ಭೇಟಿ ನೀಡಿ,

ಅನುಷ್ಠಾನಗೊಳಿಸುತ್ತಿರುವ ಮಾದರಿಯನ್ನು ವೀಕ್ಷಣೆ ಮಾಡಲು ಸಮಿತಿಯಲ್ಲಿ ತೀರ್ಮಾನಿಸಲಾಯಿತು.

ರಾಜ್ಯ ಸರ್ಕಾರದ ಅನುಮೋದನೆಯಂತೆ ಈ ಎಲ್ಲಾ ಕೆಳಕಂಡ ಸದಸ್ಯರುಗಳನ್ನೊಳಗೊಂಡಂತೆ ದಿನಾಂಕ:06.04.2022 ರಿಂದ 08.04.2022 ರವರೆಗೆ ಒಡಿಸ್ಸಾ ರಾಜ್ಯದ ಭುವನೇಶ್ವರ, ಪುರಿ ಹಾಗೂ ಕಟಕ್ ಜಿಲ್ಲೆಗಳ ವಿವಿಧ ನಗರ ಸ್ಥಳೀಯ ಸಂಸ್ಥೆಗಳು, ಒಡಿಸ್ಸಾ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (WATCO), ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ಒಡಿಸ್ಸಾ ನೀರು ಪ್ರಾಧಿಕಾರ (OWA)ಕ್ಕೆ ಭೇಟಿ ನೀಡಿ ಅಧ್ಯಯನವನ್ನು ಕೈಗೊಳ್ಳಲಾಗಿರುತ್ತದೆ.

| ಕ್ರ ಸಂ. | ಹೆಸರು ಶ್ರೀ/ಶ್ರೀಮತಿ | ಹುದ್ದೆ | ಕಚೇರಿ ಸ್ಥಳ |
|---|---|---|---|
| 1. | ಎಂ.ಶಿವಣ್ಣ, ಕೋಟೆ | ಅಧ್ಯಕ್ಷರು | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ |
| 2. | ಹೆಚ್. ಹನುಮಂತಪ್ಪ | ಅಧ್ಯಕ್ಷರು | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ |
| 3. | ಆರ್.ರಮಾ | ಕಾರ್ಯದರ್ಶಿ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ |
| 4. | ಅರ್ಚನಾ | ನಿರ್ದೇಶಕರು | ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು |
| 5. | ಗಂಗಾಧರಪ್ಪ ಆರ್ | ಯೋಜನಾ ಅಭಿಯಂತರರು | ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ |
| 6. | ಡಾ. ರಕ್ಷಿತ್ | ವೈದ್ಯರು (ಆರೋಗ್ಯಾಧಿಕಾರಿ) | ಮಹಾನಗರ ಪಾಲಿಕೆ ವೈದ್ಯರು |
| 7. | ಮಂಜುನಾಥ್ | ಸ್ಯಾನಿಟರಿ ಇಂಜಿನಿಯರ್ | RDWSD |
| 8. | ವಿಮಲ. ಬಿ ಎಸ್ | ಸಂಶೋಧನಾಧಿಕಾರಿ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ |
| 9. | ಆರ್.ವಿ.ಚಂದ್ರಶೇಖರ್ | ಕೋ ಆರ್ಡಿನೇಟರ್ ಮತ್ತು ಸಹಾಯಕ ಪ್ರೊಫೆಸರ್ | ರಾಷ್ಟ್ರೀಯ ಕಾನೂನು ಶಾಲೆ |
| 10. | ಓಬಳೇಶ್ | ಸಂಚಾಲಕರು | ಸದಸ್ಯರು ಸಫಾಯಿ ಕರ್ಮಚಾರಿಗಳ ಕಾವಲ ಸಮಿತಿ |
| 11. | ಗಂಗಮ್ಮ | ಪೌರಕಾರ್ಮಿಕರು, | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| 12. | ರಾಘವೇಂದ್ರ | ಅಧ್ಯಕ್ಷರ ಆಪ್ತ ಸಹಾಯಕರು | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ |
| 13. | ಅವಿನಾಶ್ ಕೃಷ್ಣಮೂರ್ತಿ | ಮುಖ್ಯ ಕಾರ್ಯಕ್ರಮ ಅಧಿಕಾರಿ | S31DF |
| 14. | ಕೀರ್ತಿರಾಜ್ ಸಿದ್ದಾಪುರ | ಮ್ಯಾನೇಜರ್-ಪ್ರೋಗ್ರಾಂ ಅಭಿವೃದ್ಧಿ ಅಧಿಕಾರಿ – | S31DF |

# ಅಧ್ಯಯನ ವರದಿ

ದಿನಾಂಕ: 06.04.2022ರಂದು ಒಡಿಸ್ಸಾ ರಾಜ್ಯದ ಭುವನೇಶ್ವರ, ಮರಿ ಹಾಗೂ ಕಟಕ್ ಜಿಲ್ಲೆಗಳಿಗೆ ಆಯೋಗದ ತಂಡವು ಭೇಟಿ ನೀಡಿ ಪರಿಶೀಲನೆ ನಡೆಸಿತು. ಒಡಿಸ್ಸಾ ರಾಜ್ಯದ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಅಪರ ಕಾರ್ಯದರ್ಶಿಗಳು ಒಡಿಸ್ಸಾ ರಾಜ್ಯದಲ್ಲಿ Core Sanitation Workers ಕಾರ್ಯ ನಿರ್ವಹಿಸುವಾಗ ಉಪಯೋಗಿಸುತ್ತಿರುವ ಸುರಕ್ಷತಾ ಪರಿಕರಗಳು ಹಾಗೂ ಅವರು ನಿರ್ವಹಿಸುತ್ತಿರುವ ಕಾರ್ಯವಿಧಾನದ ಬಗ್ಗೆ ಈ ಕೆಳಕಂಡಂತೆ ವಿವರಿಸಿದರು.

ಒಡಿಸ್ಸಾ ರಾಜ್ಯದಲ್ಲಿ ಸ್ವಚ್ಛತಾ ಕೆಲಸವನ್ನು ನಿರ್ವಹಿಸುವಾಗ ಸುರಕ್ಷತಾ ಪರಿಕರಗಳನ್ನು ಉಪಯೋಗಿಸದೇ ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವ ಕಾರ್ಮಿಕರ ಹೀನಾಯ ಸ್ಥಿತಿಯನ್ನು ಕಂಡು ಅವರ ಸುರಕ್ಷತೆ ಮತ್ತು ಘನತೆಯನ್ನು ಕಾಪಾಡುವ ಸಂಬಂಧ **"ಗರೀಮಾ"** ಎಂಬ ಯೋಜನೆಯನ್ನು ಪ್ರಾರಂಭಿಸಿದರು. ಗರೀಮಾ ಎಂದರೆ **"Excellence"** ಎಂದು ಅರ್ಥ. ಗರೀಮಾ ಯೋಜನೆಯು **"ಸುರಕ್ಷತೆ ಮತ್ತು ಗೌರವ"** ಕಾಪಾಡುವ ಸಲುವಾಗಿ ರೂಪಿಸಲಾಗಿರುತ್ತದೆ.

**ತ್ಯಾಜ್ಯನಿರ್ವಹಣಾ ಕಾರ್ಯವನ್ನು ನಿರ್ವಹಿಸುವಾಗ ಅಳವಡಿಸಿಕೊಂಡಿರುವ ಮಾನವ ಸಂಪನ್ಮೂಲದ ವಿವರ**

- ❖ ಘನ ತ್ಯಾಜ್ಯ ನಿರ್ವಹಣೆ (Solid Waste Management)
- ❖ ದ್ರವ ತ್ಯಾಜ್ಯ ನಿರ್ವಹಣೆ (Liquid Waste Management)
- ❖ ನೈರ್ಮಲ್ಯೀಕರಣ (Sanitation)
- ❖ ಸ್ವಚ್ಛ ಕರ್ಮಿ (Swachh Karmi)

ನೈರ್ಮಲ್ಯ ಕಾರ್ಮಿಕರನ್ನು ಅವರ ಕೌಶಲ್ಯದ ಆಧಾರದ ಮೇಲೆ **ಹೆಚ್ಚಿನ ಕೌಶಲ್ಯ ಹೊಂದಿರುವ** ಗ್ರೇಡ್ Grade – 1 ಮತ್ತು **ಕೌಶಲ್ಯವುಳ್ಳವರು** ಗ್ರೇಡ್ Grade – II ಎಂದು ವಿಭಾಗಿಸಲಾಗಿರುತ್ತದೆ. ಈ ವಿಭಾಗದಲ್ಲಿ ಸರ್ಕಾರಿ ಹಾಗೂ ಖಾಸಗಿ ನೌಕರರನ್ನು ಪರಿಗಣಿಸಲಾಗಿರುತ್ತದೆ.

| ❖ ನೈರ್ಮಲ್ಯ ಕಾರ್ಯಕರ್ತ (Core Sanitation Worker) | |
|---|---|
| **ಗ್ರೇಡ್ Grade – 1 (ಹೆಚ್ಚಿನ ಕೌಶಲ್ಯ ಹೊಂದಿರುವ)** | **ಗ್ರೇಡ್ Grade – II (ಕೌಶಲ್ಯವುಳ್ಳವರು)** |
| Desludging of on–site sanitation systems<br>Maintenance of sewer network<br>Cleaning of inspection chambers<br>Septic tank cleaning and maintenance | Cleaning of drains<br>Cleaning O & M of PT/CTs<br>O & M of FSTPs |

ಗೇಡ್–1 ಮತ್ತು ಗ್ರೇಡ್–2 ಒಡಿಸ್ಸಾ ರಾಜ್ಯದ 114 ನಗರಗಳಿಗೆ ಅನ್ವಯಿಸುತ್ತದೆ.

- ❖ ನೈರ್ಮಲ್ಯ ಕಾರ್ಯಕರ್ತ (Sanitation Worker)

ಗ್ರೇಡ್-1 ಕಾರ್ಮಿಕರನ್ನು ಹೆಚ್ಚಿನ ಕೌಶಲ್ಯ ಹೊಂದಿರುವ ಮತ್ತು ಗ್ರೇಡ್-2 ರವರನ್ನು ಕೌಶಲ್ಯವುಳ್ಳವರು ಎಂದು ಕನಿಷ್ಠ ವೇತನ ಕಾಯ್ದೆ ಅಡಿ ಪರಿಗಣಿಸಲಾಗಿರುತ್ತದೆ.

ಗ್ರೇಡ್-1 ಮತ್ತು ಗ್ರೇಡ್-2 ಕಾರ್ಮಿಕರನ್ನು ಒಡಿಸ್ಸಾ ವಾಟರ್ ಅಕಾಡೆಮಿಯಿಂದ ಅತ್ಯುತ್ತಮ ಮೂಲಭೂತಸೌಕರ್ಯ ಹಾಗೂ ತರಬೇತಿಯೊಂದಿಗೆ ಒದಗಿಸಲಾಗಿದೆ.

1. ಒಡಿಸ್ಸಾ ಸರ್ಕಾರ ಒಳಚರಂಡಿ ಸ್ವಚ್ಛತಾ ಕಾರ್ಮಿಕರ ಗೌರವ ಮತ್ತು ಸುರಕ್ಷತೆ ಹಾಗೂ ಆಧುನಿಕ ಯಂತ್ರೋಪಕರಣಗಳ ಬಳಕೆ ಕುರಿತು ಜಾರಿಮಾಡಿರುವ "ಗರೀಮಾ" ಕಾರ್ಯಕ್ರಮವು ಉತ್ತಮವಾಗಿದೆ. ಈ ಯೋಜನೆಯು ದಿನಾಂಕ:11.09.2020ರಂದು ಪರಿಚಯಿಸಿದೆ.

2. ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ದಿನಾಂಕ:1308.2021ರಲ್ಲಿ ಗ್ರೇಡ್ – 1 **ಹೆಚ್ಚಿನ ಕೌಶಲ್ಯ ಹೊಂದಿರುವ** ಕಾರ್ಮಿಕರಿಗೆ ಅವರ ವೇತನದ ಜೊತೆಗೆ 15% Risk and hardship allowance ಮಂಜೂರು ಮಾಡಲಾಗಿದೆ.

3. ಗರೀಮಾ ಯೋಜನೆಯಡಿ ಕೋರ್ ಸ್ಯಾನಿಟೇಶನ್ ವರ್ಕರ್ಸ್‌ನ್ನು ನೇರ ನೇಮಕಾತಿ ಹಾಗೂ ಖಾಸಗಿಯವರಿಂದಲೂ ನೇಮಕ ಮಾಡಿಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ. ಈ ಯೋಜನೆಯಡಿ ಕಾರ್ಯನಿರ್ವಹಿಸುವ ಎಲ್ಲಾ ನೌಕರರಿಗೂ ಒಡಿಸ್ಸಾ ವಾಟರ್ ಅಕಾಡೆಮಿಯಿಂದ ತರಬೇತಿ ನೀಡಲಾಗುವುದು.

4. ಯಾಂತ್ರೋಪಕರಣಗಳಿಂದ ಒಳಚರಂಡಿಗಳನ್ನು ಸ್ವಚ್ಚತೆ ಮಾಡಲು ಸ್ಯಾನಿಟೇಶನ್ ಕಾರ್ಮಿಕರನ್ನು ತರಬೇತಿಗೊಳಿಸಲು **"ಒಡಿಸ್ಸಾ ವಾಟರ್ ಅಕಾಡೆಮಿ"** ಪ್ರಾರಂಭಿಸಿರುವ ಪದ್ಧತಿಯು ಉತ್ತಮವಾಗಿರುತ್ತದೆ.

5. ಒಡಿಸ್ಸಾ ರಾಜ್ಯದ ವಿವಿಧ ಭಾಗಗಳಲ್ಲಿ ಒಟ್ಟು 114 ಎಫ್‌ಎಸ್‌ಟಿಪಿ (FSTP)ಗಳನ್ನು ಸ್ಥಾಪಿಸಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಪದ್ಧತಿ ನಿರ್ಮೂಲನೆ ಮಾಡಲು ಪ್ರಾರಂಭಿಸಿದೆ.

6. "ಗರೀಮಾ" ಯೋಜನೆಯು ಖಾಸಗಿ ನೈರ್ಮಲೀಕರಣ ಕಾರ್ಮಿಕರಿಂದ ಕಾರ್ಯನಿರ್ವಹಿಸಲು "Private Sanitation Service Organisation" (PSSO) ನ್ನು ಸ್ಥಾಪಿಸಿದೆ.

7. ನೇರ ನೇಮಕಾತಿಯಡಿ ನೇಮಕ ಮಾಡಿಕೊಂಡ ಕಾರ್ಮಿಕರು ನಿವೃತ್ತಿಯಾದ ನಂತರ ಆ ಹುದ್ದೆಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡಿಕೊಳ್ಳದೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿರುತ್ತದೆ.

8. "ಗರೀಮಾ" ಯೋಜನೆಯಲ್ಲಿ ಪ್ರಾಯೋಗಿಕವಾಗಿ 6 ನಗರಗಳಲ್ಲಿ ಅನುಷ್ಠಾನಗೊಳಿಸುತ್ತಿದ್ದು RSA ಮತ್ತು ERSU ಗಳನ್ನು ಸ್ಥಾಪಿಸಿದ್ದು 14420 ಸಹಾಯವಾಣಿಯನ್ನು ಸ್ಥಾಪಿಸಿದೆ.

9. ಸ್ಯಾನಿಟೇಶನ್ ಕಾರ್ಮಿಕರು ಕೆಲಸ ಮುಗಿದ ನಂತರ ಅವರ ಸ್ವಚ್ಚತೆ, ವಿಶ್ರಾಂತಿ ಮತ್ತು ಸ್ವಚ್ಚತಾ ಸಲಕರಣೆಗಳನ್ನು ಶೇಖರಿಸಿಡಲು ಪ್ರತ್ಯೇಕವಾದ ಲಾಕರ್‌ಗಳ ವ್ಯವಸ್ಥೆ ಮಾಡಿರುವ ಹವಾನಿಯಂತ್ರಿತ "ಗರೀಮ ಗೃಹ"ವನ್ನು ನಿರ್ಮಿಸಲಾಗಿದೆ. ಇದು ಹೊಸ ಕಾರ್ಯಕ್ರಮವಾಗಿದೆ.

10. ವಿನೂತನ ಹಾಗೂ ಆಧುನಿಕವಾದ ಪಿಪಿಇ ಕಿಟ್‌ಗಳನ್ನು ಒದಗಿಸಲು ರೂಪಿಸಿರುವ ಯೋಜನೆಯು ಉತ್ತಮ ಮಾದರಿಯಾಗಿದೆ.

11. ಕೋರ್ ಸ್ಯಾನೀಟೇಶನ್ ವರ್ಕರ್ ಮತ್ತು ಅವರ ಕುಟುಂಬದ ಸದಸ್ಯರಿಗೆ ಸರ್ಕಾರದ ವಿವಿಧ ಶೈಕ್ಷಣಿಕ ಹಾಗೂ ವಸತಿ ಯೋಜನೆಗಳ ಪ್ರಯೋಜನವನ್ನು ನೀಡುತ್ತಿದೆ. ಕೋರ್ ಸ್ಯಾನೀಟೇಶನ್ ವರ್ಕರ್‌ಗಳಿಗೆ (ಖಾಸಗಿ ನೌಕರರಿಗೂ ಸಹ) ಬೇರೆ ಯೋಜನೆಗಳ ಅಡಿ ಸೌಲಭ್ಯಗಳು ದೊರೆತಿಲ್ಲದಿದ್ದಲ್ಲಿ "ಗರೀಮಾ" ಯೋಜನೆಯಡಿ ಸೌಲಭ್ಯಗಳನ್ನು ಒದಗಿಸಲಾಗುವುದು.

12. ಒಡಿಸ್ಸಾ ರಾಜ್ಯ ಪಿಎಸ್‌ಎಸ್‌ಟಿ "Private Contractor'' ಗಳ ಮೂಲಕ ಸೇವೆಯನ್ನು ಒದಗಿಸುತ್ತಿದೆ. ಗರೀಮಾ ಯೋಜನೆಯಡಿ ಸ್ಯಾನಿಟೇಶನ್ ವರ್ಕರ್‌ಗಳ ವಿವರವನ್ನು Digitilise .ಮಾಡಿ ಯೋಜನೆಯ ಪ್ರಯೋಜನಗಳು ದೊರೆಯುತ್ತಿರುವುದರ ಬಗ್ಗೆ ಮೇಲ್ವಿಚಾರಣೆಯನ್ನು ಮಾಡುತ್ತಿರುತ್ತದೆ. ಈ ಪದ್ಧತಿಯನ್ನು ಕರ್ನಾಟಕ ರಾಜ್ಯದಲ್ಲಿ ಅನುಸರಿಸುವುದು ಉತ್ತಮವಾಗಿರುತ್ತದೆ.

13. ಘನತ್ಯಾಜ್ಯ ನಿರ್ವಹಣಾ ಕಾರ್ಯವನ್ನು ಸ್ವಚ್ಛತಾ ಕಾರ್ಮಿಕರನ್ನು ಹೊರತುಪಡಿಸಿದಂತೆ ಮಹಿಳಾ ಸಂಘ ಸಂಸ್ಥೆಯವರು ನಿರ್ವಹಿಸುತ್ತಾರೆ.

14. ಕಟಕ್ ನಗರ ಸಭೆಯಲ್ಲಿ ಪ್ರಾರಂಭಿಸಿರುವ ಎಫ್‌ಎಸ್‌ಟಿಪಿಯನ್ನು ತೃತೀಯ ಲಿಂಗಿ ಸಮುದಾಯದವರಿಗೆ (ಮಂಗಳಮುಖಿ) ನೀಡಲಾಗಿದೆ. 10 ಜನರುಳ್ಳ ಒಂದು ಸಂಸ್ಥೆಯು ಎಸ್‌ಟಿಪಿ ಕಾರ್ಯಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ನಿರ್ವಹಣೆ ಮಾಡುತ್ತಿದ್ದು, ಅವರ ದಿನನಿತ್ಯದ ಜೀವನೋಪಾಯ ವೃದ್ಧಿಗೊಳಿಸಿರುವುದು ಒಂದು ಹೊಸ ಮಾದರಿಯಾಗಿದೆ.

15. ಮನೆಮನೆಯಿಂದ ತ್ಯಾಜ್ಯ ಸಂಗ್ರಹಣೆಯನ್ನು ತೃತೀಯ ಲಿಂಗಿಯವರು ನಿರ್ವಹಿಸುತ್ತಿರುತ್ತಾರೆ. ಮನೆಗಳಿಂದ ತ್ಯಾಜ್ಯವನ್ನು ಸಾಗಿಸಲು ಉಪಯೋಗಿಸುವ ವಾಹನದ ಚಾಲನೆಯನ್ನೂ ಸಹ ತೃತೀಯ ಲಿಂಗಿಯವರು ನಿರ್ವಹಿಸುತ್ತಿರುತ್ತಾರೆ. ಈ ಕಾರ್ಯಗಳನ್ನು ನಿರ್ವಹಿಸಲು ಇವರಿಗೆ ಪ್ರತ್ಯೇಕ ತರಬೇತಿಯನ್ನು ನೀಡಲಾಗಿರುತ್ತದೆ.

16. ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡಿಸುವ ಸಲುವಾಗಿ ಪ್ರತಿ ತಿಂಗಳ 20ನೇ ತಾರೀಕಿನಂದು ಸಮಾಜದ ಗಣ್ಯ ವ್ಯಕ್ತಿಗಳ ಸಮ್ಮುಖದಲ್ಲಿ ಸಭೆಯನ್ನು ಏರ್ಪಡಿಸಲಾಗುತ್ತಿದೆ.

17. ಒಡಿಸ್ಸಾ ಸರ್ಕಾರವು ವಿವಿಧ ನೈರ್ಮಲ್ಯ ಕಾರ್ಮಿಕರು ವಿವಿಧ PPEಗಳನ್ನು ಬಳಸುವುದನ್ನು ಕಡ್ಡಾಯಗೊಳಿಸಿದೆ. ವಿನೂತನ ಹಾಗೂ ಅಧುನಿಕವಾದ ಪಿಪಿಇ ಕಿಟ್‌ಗಳನ್ನು ಒದಗಿಸಲು ಯೋಜನೆ ರೂಪಿಸಿರುವ ಮಾದರಿ ಉತ್ತಮವಾಗಿದೆ.

18. ಮ್ಯಾನ್‌ಹೋಲ್ ಸ್ವಚ್ಛಗೊಳಿಸಲು ವಿವಿಧ ರೀತಿಯ ಆಧುನಿಕ ಯಂತ್ರೋಪಕರಣಗಳನ್ನು ಬಳಸುತ್ತಿದ್ದು, ಅನಿವಾರ್ಯ ಸಂದರ್ಭಗಳಲ್ಲಿ ಮನುಷ್ಯನನ್ನು ಮ್ಯಾನ್‌ಹೋಲ್ ಒಳಗೆ ಇಳಿಸಬೇಕಾದ ಸಂದರ್ಭ ಬಂದಲ್ಲಿ ಕಾಯ್ದೆಯ ಪ್ರಕಾರ ಉಪಯೋಗಿಸಬೇಕಾದಂತಹ ಸುರಕ್ಷತಾ ಪರಿಕರಗಳನ್ನೇ ಧರಿಸಿ ಸ್ವಚ್ಛಗೊಳಿಸುವ ಮಾದರಿ ಅತ್ಯುತ್ತಮವಾಗಿದೆ.

19. ಸ್ವಚ್ಛತಾ ಕಾರ್ಮಿಕರ ಅಭಿವೃದ್ಧಿಗಾಗಿ ನಗರಾಭಿವೃದ್ಧಿ ಮತ್ತು ವಸತಿ ಇಲಾಖೆಯ ಅಡಿ ಪ್ರತ್ಯೇಕವಾದ ಲೆಕ್ಕಶೀರ್ಷಿಕೆಯನ್ನು ಅಳವಡಿಸಿಕೊಂಡು ಅದರಲ್ಲಿ ಅನುದಾನವನ್ನು ಒದಗಿಸಿಕೊಳ್ಳಲಾಗಿದೆ.

20. ಈ ಅನುದಾನವು ವರ್ಷಾಂತ್ಯಕ್ಕೆ ವ್ಯಪಗತವಾಗದೇ ಉಳಿತಾಯವಾಗಿದ್ದಲ್ಲಿ, ಮುಂದಿನ ಸಾಲಿಗೆ ಈ ಅನುದಾನವನ್ನು ಮುಂದುವರೆಸಿಕೊಂಡು ಹೋಗಲಾಗುತ್ತದೆ.

21. ಕೇಂದ್ರ ಸರ್ಕಾರದ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಯಂತ್ರೋಪಕರಣಗಳ ಖರೀದಿಗಾಗಿ ಸಾಲಸೌಲಭ್ಯವನ್ನು ಪಡೆಯಲಾಗಿದೆ.

22. ಒಡಿಸ್ಸಾ ಸರ್ಕಾರದಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳಿಗೆ ಹೆಚ್ಚಿನ ಸಾಲಸೌಲಭ್ಯ ಹಾಗೂ ವಿವಿಧ ಯೋಜನೆಗಳನ್ನು ಕಲ್ಪಿಸಲಾಗಿದೆ.

ಅಧ್ಯಯನ ತಂಡವು 2 ದಿನಗಳ ಪ್ರವಾಸ ಸಂದರ್ಭದಲ್ಲಿ ಮೇಲ್ಕಂಡ ಅಂಶಗಳನ್ನು ಅಧ್ಯಯನ ನಡೆಸಿ ಒಡಿಸ್ಸಾ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿರುವ Best Practices ಕರ್ನಾಟಕ ರಾಜ್ಯದಲ್ಲೂ ಸಹ ಅಳವಡಿಸಿಕೊಳ್ಳಲು ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ.

1. ಒಡಿಸ್ಸಾ ಜಿಲ್ಲೆಯಲ್ಲಿ "ಗರೀಮಾ" ಯೋಜನೆಗೆ ಪ್ರತ್ಯೇಕವಾದ ಲೆಕ್ಕಶೀರ್ಷಿಕೆಯನ್ನು ಅಳವಡಿಸಿಕೊಂಡಿರುವ ಮಾದರಿಯಲ್ಲಿ ರಾಜ್ಯದಲ್ಲೂ ಸಹ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕುಟುಂಬದವರು ಮತ್ತು ಸ್ಯಾನಿಟರಿ ವರ್ಕರ್ಸ್‌ಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾದ ಲೆಕ್ಕ ಶೀರ್ಷಿಕೆಯನ್ನು ಅಳವಡಿಸಿಕೊಂಡು ಅನುದಾನವನ್ನು ಮಿಸಲಿಡುವುದು. ಆರ್ಥಿಕ ವರ್ಷದ ಅಂತ್ಯಕ್ಕೆ ವೆಚ್ಚವಾಗದೇ ಉಳಿದಲ್ಲಿ ವ್ಯಪಗತವಾಗದೇ ಮುಂದಿನ ಆರ್ಥಿಕ ವರ್ಷಕ್ಕೆ ಖರ್ಚು ಮಾಡಲು ಅವಕಾಶ ಕಲ್ಪಿಸುವುದು ಅವಶ್ಯವಿರುತ್ತದೆ.

2. ಸ್ಯಾನಿಟರಿ ಕೆಲಸ ಮಾಡುವಂತಹ ಕಾರ್ಮಿಕರಿಗೆ ಅವರ ವಸ್ತುಗಳನ್ನು ಮತ್ತು ವಸ್ತ್ರಗಳನ್ನು ಬದಲಾವಣೆ ಮಾಡಲು, ಬದಲಾಯಿಸಿ ವಸ್ತ್ರಗಳನ್ನು ಸ್ವಚ್ಛಗೊಳಿಸಲು ಶೌಚಾಲಯದ ವ್ಯವಸ್ಥೆ, ಊಟ ಮಾಡಲು ಕುಳಿತುಕೊಳ್ಳಲು ಸ್ಥಳ, ಕುಡಿಯುವ ನೀರಿನ ವ್ಯವಸ್ಥೆಯನ್ನು ಒಳಗೊಂಡಂತೆ ಪ್ರತ್ಯೇಕವಾಗಿ ಗರೀಮಾ ಗೃಹ ಎಂಬ ವಿಶ್ರಾಂತಿಗೃಹಗಳನ್ನು ಪ್ರಾರಂಭಿಸಿರುತ್ತಾರೆ. ಅದರಂತೆ, ನಮ್ಮ ರಾಜ್ಯದಲ್ಲೂ ಸಹ ಕಾರ್ಯನಿರ್ವಹಿಸುತ್ತಿರುವಂತಹ ಸ್ಯಾನಿಟರಿ ವರ್ಕರ್ಸ್/ಸಫಾಯಿ ಕರ್ಮಚಾರಿಗಳಿಗೆ ಪ್ರತ್ಯೇಕವಾದ ಸುಸಜ್ಜಿತ ವಿಶ್ರಾಂತಿಗೃಹಗಳನ್ನು ನಿರ್ಮಿಸುವುದು. ಅವಶ್ಯಕವಾಗಿರುತ್ತದೆ.

3. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಸಗಿ ವಲಯದಲ್ಲಿ ಸಕ್ಕಿಂಗ್, ಜೆಟ್ಟಿಂಗ್ ಮತ್ತು ರಾಡರಿಂಗ್ ಇತರೆ ಸ್ವಚ್ಛತಾ ಕಾರ್ಯಕ್ಕೆ ಬಳಸುವ ಸಕ್ಕಿಂಗ್, ಜೆಟ್ಟಿಂಗ್ ಮತ್ತು ರಾಡರಿಂಗ್ ಇತರೆ ಯಂತ್ರಗಳನ್ನು ಬಳಕೆ ಮಾಡುತ್ತಿದ್ದು, ಇವುಗಳ ನೋಂದಣಿ ಸಹ ಇಲ್ಲದೇ ಇರುವುದರಿಂದ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಲು ಸಾಧ್ಯವಾಗಿರುವುದಿಲ್ಲ. ಆದುದರಿಂದ, ಒಡಿಸ್ಸಾ ಮಾದರಿಯಲ್ಲಿ ಸ್ವಚ್ಛತಾ ಕಾರ್ಮಿಕರ ಹಾಗೂ ಯಂತ್ರಗಳ ಡಾಟಾ ಬೇಸ್‌ನ್ನು ಆನ್‌ಲೈನ್‌ನಲ್ಲಿ ನಿರ್ವಹಿಸುವುದು ಅವಶ್ಯಕವಾಗಿರುತ್ತದೆ.

4. ಸ್ಯಾನಿಟರಿ ಕೆಲಸ ಮತ್ತು ಯಂತ್ರೋಪಕರಣಗಳ ನಿರ್ವಹಣೆಯನ್ನು ಒಡಿಸ್ಸಾ ವಾಟರ್ ಅಕಾಡಮಿಯಿಂದ ತರಬೇತಿ ನೀಡುತ್ತಿರುವ ಮಾದರಿಯಲ್ಲಿಯೇ ರಾಜ್ಯದಲ್ಲಿ **ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಯಾನಿಟರಿ ವರ್ಕರ್‌ಗಳಿಗೆ ಕಡ್ಡಾಯವಾಗಿ ತರಬೇತಿ ನೀಡಲು ಪ್ರತಿ ವಿಭಾಗೀಯ ಮಟ್ಟದಲ್ಲಿ ತರಬೇತಿ ಕೇಂದ್ರವನ್ನು ಪ್ರಾರಂಭಿಸುವುದು.**

5. ಒಡಿಸ್ಸಾ ರಾಜ್ಯದಲ್ಲಿ ತೃತೀಯ ಲಿಂಗಿಗಳಿಗೆ ಎಸ್‌ಟಿಪಿ ಟ್ಯಾಂಕ್‌ಗಳ ನಿರ್ವಹಣೆಗಾಗಿ ಪ್ರತ್ಯೇಕವಾದ ಸಂಘಗಳನ್ನು ರಚಿಸಿ ಎಸ್‌ಟಿಪಿ ಟ್ಯಾಂಕ್‌ಗಳ ನಿರ್ವಹಣೆಯಿಂದ ಬರುವ ಆದಾಯದಿಂದ 10 ಕುಟುಂಬಗಳ ನಿರ್ವಹಣೆಗೆ ಸಹಾಯಕಾರಿಯಾಗಿರುತ್ತದೆ. ಕರ್ನಾಟಕ **ರಾಜ್ಯದಲ್ಲಿ ಪ್ರಾರಂಭವಾಗುತ್ತಿರುವಂತಹ ಎಸ್‌ಟಿಪಿ ಮತ್ತು ಎಫ್‌ಎಸ್‌ಟಿಪಿ ಪ್ಲಾಂಟ್‌ಗಳ ನಿರ್ವಹಣೆಯನ್ನು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಪ್ರತ್ಯೇಕವಾಗಿ ಸಂಘಗಳನ್ನು ರಚಿಸಿ ನೀಡಿದ್ದಲ್ಲಿ ಪುನರ್ವಸತಿ ಕಲ್ಪಿಸಬಹುದಾಗಿರುತ್ತದೆ.**

6. ಕರ್ನಾಟಕದಲ್ಲಿ ವಾಟರ್ ಅಕಾಡೆಮಿಯನ್ನು ಸ್ಥಾಪಿಸಬೇಕು. ಒಳಚರಂಡಿ ಕಾರ್ಮಿಕರಿಗೆ ತರಬೇತಿ ನೀಡುವುದು ಅವಶ್ಯಕವಾಗಿದೆ. ಉತ್ತಮವಾದ ತರಬೇತಿ ಕೇಂದ್ರವಿರಬೇಕು. ಸುರಕ್ಷತಾ ಪರಿಕರಗಳ ಬಳಕೆ, ತಂತ್ರಜ್ಞಾನದ ಬಳಕೆ ಮತ್ತು ಯಾಂತ್ರಿಕವಾಗಿ ಸ್ವಚ್ಛಗೊಳಿಸುವ ವಿಧಾನಗಳನ್ನು ನಿರಂತರವಾಗಿ ಕಾರ್ಮಿಕರಿಗೆ ತರಬೇತಿಯನ್ನು ನೀಡಬೇಕು. ಎಸ್‌ಟಿಪಿಗಳ ನಿರ್ವಹಣೆಯ ಕುರಿತು ಈ ತರಬೇತಿ ಕೇಂದ್ರದಲ್ಲಿಯೇ ತರಬೇತಿಯನ್ನು ನೀಡಬೇಕು. ಈ ಎಲ್ಲಾ ಚಟುವಟಿಕೆಗಳನ್ನು ಅಕಾಡೆಮಿ ಮುಖಾಂತರವೇ ನಿರ್ವಹಿಸುವುದು.

7. Survey of sanitation workers ಇವರನ್ನು **skilled labours ಎಂದು ಪರಿಗಣಿಸಿ ಕನಿಷ್ಠ ವೇತನ ಕಾಯ್ದೆಗೆ ಒಳಪಡಿಸುವುದು.**

8. Risk allowance/hardship allowance **ನೀಡುವುದು.**

9. **ಆರೋಗ್ಯ ವಿಮೆಯ ಸೌಲಭ್ಯವನ್ನು ಒದಗಿಸುವುದು**

**ಎಂ.ಶಿವಣ್ಣ (ಕೋಟೆ)**
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ,
ಬೆಂಗಳೂರು

H **ಹನುಮಂತಪ್ಪ**
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ
ಅಭಿವೃದ್ಧಿ ನಿಗಮ, ಬೆಂಗಳೂರು

**ನಿರ್ದೇಶಕರು,**
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

for Manjunatha
Jan Engineer
**ಆಯುಕ್ತರು,**
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು

**ಕಾರ್ಯದರ್ಶಿ**
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು

for. Gangadharappa R.
(project engineer)
**ಕಾರ್ಯನಿರ್ವಾಹಕ ಕಾರ್ಯದರ್ಶಿ,**
ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಕ್ಯಾಂಪಸ್

**ಪ್ರಾಂಶುಪಾಲರು**
ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಕ್ಯಾಂಪಸ್, ಬೆಂಗಳೂರು

**ಸಂಶೋಧನಾಧಿಕಾರಿ,** (ಪ್ರಭಾರ)
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು

**ಅಭಿಯಂತರರು**
ಸುರಕ್ಷತಾ ಪರಿಕರಗಳನ್ನು ಸಮರ್ಪಕವಾಗಿ ನಿಯಂತ್ರಿಸುವ ತಾಂತ್ರಿಕ ತಜ್ಞರು

ವೈದ್ಯರು (ಆರೋಗ್ಯಾಧಿಕಾರಿ)
ಚರ್ಮ ಹಾಗೂ ಸ್ವಚ್ಛತಾ ಕಾರ್ಮಿಕರ ಸಂಬಂಧಪಟ್ಟ ಖಾಯಿಲೆಗಳಿಗೆ ಚಿಕಿತ್ಸೆ ಮಾಡುವ ವೈದ್ಯರು

**ಸಂಚಾಲಕರು**
ತಳ ಸಮುದಾಯಗಳ ಅಧ್ಯಯನ ಕೇಂದ್ರ

**ಡಾ.ಕೆ.ಜಿ.ಓಬಳೇಶ್,**
ರಾಜ್ಯ ಸಂಚಾಲಕರು, ಸಫಾಯಿ ಕರ್ಮಚಾರಿ ಕಾವಲು ಸಮಿತಿ

**ಶ್ರೀಮತಿ. ಗಂಗಮ್ಮ ಕೋಂ ಎರಪ್ಪ,**
ಸಫಾಯಿ ಕರ್ಮಚಾರಿ

ಗಂಗಮ್ಮ

# ದಿನಾಂಕ : 06-04-2022 ರಿಂದ 08-04-2022ರ ವರೆಗೆ ಒಡಿಸ್ಸಾ ರಾಜ್ಯದ ಭುವನೇಶ್ವರ್, ಪುರಿ ಹಾಗೂ ಕಟಕ್ ಜಿಲ್ಲೆಗಳಿಗೆ ಅಧ್ಯಯನ ತಂಡವು ಭೇಟಿ ನೀಡಿದ ಸಮಯದ ವಿವಿಧ ಚಿತ್ರಗಳು



**ದಿನಾಂಕ:07.04.2022 ರಂದು ಒಡಿಸ್ಸಾ ಜಿಲ್ಲೆಯ ಕಛೇರಿಯಲ್ಲಿ ಗರಿಮಾ ಯೋಜನೆಯ ಬಗ್ಗೆ ನಡೆದ ಸಭೆ**



**ದಿನಾಂಕ:07.04.2022 ರಂದು ಒಡಿಸ್ಸಾ ಜಿಲ್ಲೆಯ ಕಛೇರಿಯಲ್ಲಿ ಗರಿಮಾ ಯೋಜನೆಯ ಬಗ್ಗೆ ನಡೆದ ಸಭೆ**



**ದಿನಾಂಕ:07.04.2022 ರಂದು ಒಡಿಸ್ಸಾ ಜಿಲ್ಲೆಯ ಕಛೇರಿಯಲ್ಲಿ ಗರಿಮಾ ಯೋಜನೆಯ ಬಗ್ಗೆ ನಡೆದ ಸಭೆ**



**ದಿನಾಂಕ:07.04.2022 ರಂದು ಒಡಿಸ್ಸಾದಲ್ಲಿ ನಡೆದ ಸಭೆ**



ಒಡಿಸ್ಸಾ ವಾಟರ್ ಅಕಾಡೆಮಿಯಲ್ಲಿ ಪ್ರದರ್ಶನಕ್ಕೆ ಇಟ್ಟಿರುವ ಸುರಕ್ಷತಾ ಪರಿಕರಗಳು



ಒಡಿಸ್ಸಾ ವಾಟರ್ ಅಕಾಡೆಮಿಯಲ್ಲಿ ಮ್ಯಾನ್‌ಹೋಲ್ ಸ್ವಚ್ಛಗೊಳಿಸಲು ಉಪಯೋಗಿಸುವ ಸುರಕ್ಷತಾ ಪರಿಕರಗಳು



**ಒಡಿಸ್ಸಾ ವಾಟರ್ ಅಕಾಡೆಮಿಯಲ್ಲಿ ಮ್ಯಾನ್‌ಹೋಲ್ ಸ್ವಚ್ಛಗೊಳಿಸಲು ಉಪಯೋಗಿಸುವ ಸುರಕ್ಷತಾ ಪರಿಕರಗಳು**



**ಒಡಿಸ್ಸಾ ವಾಟರ್ ಅಕಾಡೆಮಿಯಲ್ಲಿ ಮ್ಯಾನ್‌ಹೋಲ್ ಸ್ವಚ್ಛಗೊಳಿಸಲು ಉಪಯೋಗಿಸುವ ಸುರಕ್ಷತಾ ಪರಿಕರಗಳು**



**WATCO ಸಂಸ್ಥೆಯಲ್ಲಿ ಸ್ವಚ್ಛತೆಗಾಗಿ ಬಳಸುವ ತಂತ್ರಜ್ಞಾನವುಳ್ಳ ಯಂತ್ರ**



**ಒಡಿಸ್ಸಾ ವಾಟರ್ ಅಕಾಡೆಮಿಯಲ್ಲಿ ಮ್ಯಾನ್‌ಹೋಲ್ ಸ್ವಚ್ಛಗೊಳಿಸಲು ಉಪಯೋಗಿಸುವ ಸುರಕ್ಷತಾ ಪರಿಕರಗಳು**



**WATCO ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾಗಾರರ ಸಮವಸ್ತ್ರ**



**WATCO ಸಂಸ್ಥೆಯಲ್ಲಿ ಸ್ವಚ್ಛತೆಗಾಗಿ ಬಳಸುವ ತಂತ್ರಜ್ಞಾನವುಳ್ಳ ಯಂತ್ರ**



**WATCO ಸಂಸ್ಥೆಯಲ್ಲಿ ಸ್ವಚ್ಛತೆಗಾಗಿ ಬಳಸುವ ತಂತ್ರಜ್ಞಾನವುಳ್ಳ ಯಂತ್ರ**



**WATCO ಸಂಸ್ಥೆಯಲ್ಲಿ ಸ್ವಚ್ಛತೆಗಾಗಿ ಬಳಸುವ ತಂತ್ರಜ್ಞಾನವುಳ್ಳ ಯಂತ್ರ**



**WATCO ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಸಮವಸ್ತ್ರ**



**WATCO ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾಗಾರರ ಸಮವಸ್ತ್ರ ಮತ್ತು ಯಂತ್ರೋಪಕರಣ**



**WATCO ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾಗಾರರ ಸಮವಸ್ತ್ರ ಮತ್ತು ಯಂತ್ರೋಪಕರಣ**



**WATCO ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾಗಾರರ ಸಮವಸ್ತ್ರ ಮತ್ತು ಯಂತ್ರೋಪಕರಣಗಳು**



**WATCO ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾಗಾರರ ಸಮವಸ್ತ್ರ ಮತ್ತು ಯಂತ್ರೋಪಕರಣ**



**WATCO ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾಗಾರರ ಸಮವಸ್ತ್ರ ಮತ್ತು ಯಂತ್ರೋಪಕರಣ**



**WATCO ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾಗಾರರ ಸಮವಸ್ತ್ರ ಮತ್ತು ಯಂತ್ರೋಪಕರಣ**



**WATCO ಸಂಸ್ಥೆಯ ಅಧಿಕಾರಿಗಳು ಕಾರ್ಯವಿಧಾನವನ್ನು ವಿತರಿಸುತ್ತಿರುವುದು**




**WATCO ಸಂಸ್ಥೆಯ ಅಧಿಕಾರಿಗಳು ಕಾರ್ಯವಿಧಾನವನ್ನು ವಿತರಿಸುತ್ತಿರುವುದು**



**WATCO ಸಂಸ್ಥೆಯ ಅಧಿಕಾರಿಗಳು ಕಾರ್ಯವಿಧಾನವನ್ನು ವಿತರಿಸುತ್ತಿರುವುದು**



**OWA ಸಂಸ್ಥೆಯ ಅಧಿಕಾರಿಗಳು ಸುಕರ್ಷತಾ ಯಂತ್ರದ ಕಾರ್ಯವಿಧಾನವನ್ನು ವಿತರಿಸುತ್ತಿರುವುದು**



**ಒಡಿಸ್ಸಾ ನಗರದಲ್ಲಿ ಸ್ಯಾನಿಟರಿ ವರ್ಕರ್ಸ್‌ಗಾಗಿ ನಿರ್ಮಾಣ ಮಾಡಿರುವ ಹವಾನಿಯಂತ್ರಿತ ವಿಶ್ರಾಂತಿಗೃಹದಲ್ಲಿ ಒದಗಿಸಿರುವ ಸ್ನಾನಗೃಹ ಮತ್ತು ಲಾಕರ್‌ಗಳ ವೀಕ್ಷಣೆ**



**ಕಟಕ್ ನಗರಸಭೆಯ ವತಿಯಿಂದ ನಿರ್ಮಾಣ ಮಾಡಿರುವ ಎಸ್‌ಟಿಪಿ ಪ್ಲಾಂಟ್‌ನ ನಿರ್ವಹಣೆ ಕುರಿತು ಚರ್ಚೆ**



**ಕಟಕ್ ನಗರಸಭೆಯ ವತಿಯಿಂದ ನಿರ್ಮಾಣ ಮಾಡಿರುವ ಎಸ್‌ಟಿಪಿ ಪ್ಲಾಂಟ್‌ನ ಕಾರ್ಯನಿರ್ವಹಿಸುತ್ತಿರುವ, ನಿರ್ವಹಣೆ ಮಾಡುತ್ತಿರುವ ಮಂಗಳಮುಖಿಯರೊಂದಿಗೆ ಚರ್ಚೆ**



ಎಸ್‌ಟಿಪಿ ಟ್ಯಾಂಕ್‌ಗಳ ನಿರ್ವಹಣೆ ಮಾಡುತ್ತಿರುವ ಸಿಬ್ಬಂದಿಗಳ ಸಮವಸ್ತ್ರ



ಕಟಕ್ ನಗರಸಭೆಯಲ್ಲಿ ಎಸ್‌ಟಿಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಂಗಳಮುಖಿಯರ ಸಂಘದ ಪ್ರತಿನಿಧಿಗಳೊಂದಿಗೆ ಚಿತ್ರ



**ಕಟಕ್ ನಗರದಲ್ಲಿ ಮಂಗಳಮುಖಿಯ ಸಂಘದಿಂದ ನಿರ್ವಹಿಸಲ್ಪಡುತ್ತಿರುವ ಎಸ್‌ಟಿಪಿ ಪ್ಲಾಂಟ್**



**ದಿನಾಂಕ:07.04.2022 ರಂದು ಒಡಿಸ್ಸಾ ರಾಜ್ಯದ ಭುವನೇಶ್ವರದ ಸಚಿವಾಲಯದ ಜಲಭವನ'ಕ್ಕೆ ಭೇಟಿ ನೀಡಿದ ಸಮಿತಿಯ ಸದಸ್ಯರು**



**OWA ನಲ್ಲಿ ಮ್ಯಾನ್‌ಹೋಲ್ ಸ್ವಚ್ಛಗೊಳಿಸಲು ಪ್ರಾಯೋಗಿಕವಾಗಿ ಬಳಸುವ ಸುರಕ್ಷತಾ ಯಂತ್ರ**



**WATCO ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮವಸ್ತ್ರ ಧರಿಸಿದ ಕಾರ್ಮಿಕರೊಂದಿಗಿನ ಚಿತ್ರ**

ଗରିମା garima

FOR SAFETY & DIGNITY OF
CORE SANITATION WORKERS

## Human Resources engaged in Sanitation

| Solid Waste Management | Liquid Waste Management | Sanitation |
|---|---|---|
| Swachh Karmi | Core Sanitation Worker | Sanitation Worker |

**Core Sanitation Worker**

**Grade - I**

1. Desludging of on-site sanitation systems
2. Maintenance of sewer network
3. Cleaning of inspection chambers
4. Septic tank cleaning & maintenance

**Grade - II**

1. Cleaning of drains
2. Cleaning, O&M of PT/CTs
3. O&M of FSTPs



**Desludging of septic tank**



**Sewerage network maintenance**



**Drain cleaning**



**O&M of FSTP**



**O&M of PT/CTS**

garima 2






***We clean these open drains with bare hands. We find all sort of stuff inside these drains- plastic bags, bottles, broken glass, stones, blades and even animal carcasses. We contract skin and respiratory diseases and live 10-15 years lesser than others.***








"*Every time, we open a manhole or a septic tank, we inhale many harmful gases.*
*Many of us die due to toxic gases or if the tank or drain caves in on us.*
*Most of us get inside a septic tank/sewer line –totally drunk. Its only then that we can bear the stench.*"





*"No wash rooms or changing rooms where we can wash before we head back home.."*





*"Even after washing, my body stinks.. my kids don't like to come near me as I smell of potty.."*

## Manual Scavenging Banned in India

**Prohibition of Employment as Manual Scavengers and their Rehabilitation Act, 2013**

- Mechanical cleaning is to be prioritized. Employer should provide all safety devices and protective gears
- No person is allowed to clean a sewer or septic tank without proper safety gears and permissions
- FOR REHABILITATION OF MANUAL SCAVENGERS
  - One time grant of Rs. 40,000
  - Housing support
  - Scholarship to children
- Compensation of **Rs. 10 lakh in case of death** to families of all deceased manual scavengers



## Punishment for Illegal Cleaning

If anyone is found manually cleaning the maintenance holes/septic tanks, the person, local authority or agency employing them will be subjected to penalty.



| Type of Offense | Quantum of Fine | Term of imprisonment (Jail) | Penalty |
|---|---|---|---|
| First offense | Up to Rs 2 lakh | Up to 2 years | Fine or imprisonment or with both |
| Subsequent offense | Up to Rs 5 lakh | Up to 5 years | |

**The sanitation worker will not be punished if they are forced to clean sewer or septic tank manually**



There is a strong **need to clearly articulate roles, responsibilities, accountability and culpability of stakeholders at all levels to change these, and acting on them**

**There is an urgent need to…**

A. Provide **safer working environment** to Core Sanitation Workers

B. Provide **dignity** to Core Sanitation Workers

10

## Birth of 'Garima' Scheme

**Conceptualisation**

- **In-house discussion** on Identification of issue, need for intervention and concept development
- **National Consultation** on a dedicated scheme for the welfare of sanitation workers, especially those who come in regular contact with **'human faecal matter'** in participation of civil society organisations like Safai Karmachari Andolan, donor agencies, think tanks and sanitation professionals




garima

11

## Birth of 'Garima' Scheme

**Design**

- **Secondary Research** on various initiatives across the country targeted towards welfare of sanitation workers
- Finalisation of **components of the scheme** and intended beneficiaries considering the hazardous nature of their jobs and vulnerability
- **Convergence** across different state departments working in the sector for their suggestions on components of the scheme






## Birth of 'Garima' Scheme

**Implementation**

- **Gazette Notification** of 'Garima' Scheme for implementation across 114 ULBs of the state
- Constitution of **State Implementation and Review Committee** with membership of concerned department heads, Representatives from civil society organisation and institutions

## **Garima**: Scheme for Safety & Dignity of core sanitation workers






- Launched on **11th Sep 2020**
- To ensure Protection & Welfare of Core Sanitation Workers and their families in Odisha



## Scheme Components

**1 IDENTIFICATION AND REGISTRATION**
- Survey for identification of core sanitation workers
- Registration of PSSO
- Orientation of core sanitation worker
- Periodic Capacity Building
- Skill Development
- App based grievance monitoring System

**2 TECHNICAL MODALITIES**
- Ensuring safety in service delivery system
- Setting up "Emergency Response Sanitation Unit (ERSU)"
- Regulating Services in Confined Spaces
- Provision of PPEs, Safety Devices and appropriate cleaning devices

**3 SERVICE BENEFITS**
- Assured Minimum Wages
- Life & Health Insurance
- Risk & Hardship Allowance
- Disability support & Illness allowance
- Caste Certificate
- Periodic health check-ups and treatment
- EPF & Retirement benefit
- Reduced working hours

**4 SOCIAL SECURITY BENEFITS**
- Pucca House
- Mobility Support
- Mobile Support
- Education of Children
- Empowerment of women members of the family
- Support for Individual entrepreneurship

## Scheme Components

**1** **IDENTIFICATION AND REGISTRATION**
- Survey for identification of core sanitation workers
- Registration of PSSO
- Orientation of core sanitation worker
- Periodic Capacity Building
- Skill Development
- App based grievance monitoring System


**2** **TECHNICAL MODALITIES**
- Ensuring safety in service delivery system
- Setting up "Emergency Response Sanitation Unit (ERSU)"
- Regulating Services in Confined Spaces
- Provision of PPEs, Safety Devices and appropriate cleaning devices

**3** **SERVICE BENEFITS**
- Assured Minimum Wages
- Life & Health Insurance
- Risk & Hardship Allowance
- Disability support & Illness allowance
- Caste Certificate
- Periodic health check-ups and treatment
- EPF & Retirement benefit
- Reduced working hours

**4** **SOCIAL SECURITY BENEFITS**
- Pucca House
- Mobility Support
- Mobile Support
- Education of Children
- Empowerment of women members of the family
- Support for Individual entrepreneurship



## Institutional Arrangements for implementation of the scheme



## Survey for Identification of Core Sanitation Workers



## Survey in 6 pilot cities

- To identify workers for linking them with their rights and entitlements
- Enumeration to develop database of sanitation workers under the Garima scheme
- Pilot survey conducted in Six biggest cities of Odisha – Bhubaneswar, Cuttack, Puri, Rourkela, Sambalpur & Berhampur



garima 18

# Enumeration Process

## Survey Tool

**Inclusion was the key principle- Any worker working in urban areas**
Informal workers with no proof, residing in peri-urban areas etc. were included

**Section A: General Information**

- Name, gender, address, contact detail

**Section B: Job Roles and Information**

- Nature of employment, employer details, modality of engagement, mode of receiving wages, coverage-EPF, insurance etc.
- Captured details of workers involved in six types of sanitation work- Community & Public Toilets, Operation & Maintenance (O&M) of Wastewater Treatment Plant, Drain Cleaning, Emptying of Septic tank, Sewer Line Cleaning and Maintenance, Other sanitation work involving direct handling of human faecal

**Section C: Social and Family Details**

- Social background, reason for working in sanitation sector, family members' details, education levels, housing access, access to ration card, Aadhaar card etc.


**Section D: Contractor Details**

- Contact details, types of services provided, status of engagement with ULB etc.

garima

20

## Mobile application developed for survey






## Pre-survey process flow

**Training of enumerators** →
- Peer-led survey
- Field level testing of app

**Orientation of ULB staff to the scheme and survey** →
Meetings of the enumerators, **Garima nodal officer**, field staff

**Mapping of sanitation workers** →
- Identification of settlements of sanitation workers
- Identification of workers engaged with ULBs and PSSOs

**IEC for the survey** →
- **Discussion during morning assembly**
- **Hoardings, leaflet distribution**
- **Community meetings- Opening**









## Process flow during the survey

Survey started on field
- Daily coordination with the enumerators
- **Refresher trainings** for the enumerators

↓


**Quality Check calls** to respondents (Sample) (to confirm basic and work-related information of the respondent)


↓

**Error flagging** and rectification of the surveys data

↓

**Training of call-center operators**







## Ascertaining identity of sanitation workers

1 **Identification with help of peer workers, community leaders, contractors, ULB field staff (CO, Swachh Saathi, Sanitary Inspectors etc.)**

| | | |
|---|---|---|
| 2 | **Informal interaction** | What equipment do you use? How do you carry out your work? (Respondents shared pictures and videos of themselves working) |
| 3 | **Questions asked to confirm the respondent as CSW in the survey** | 1. Location of workplace<br>2. Name and contact number of supervisors<br>3. Proof of employment<br>4. Details of last work: Where, when, through whom?<br>5. Since when have you been doing sanitation work?<br>6. Caste/ Sub-caste, place of residence<br>7. How did you get into sanitation work? |

## Post Survey Process Flow

- Publication of draft list
- Desk validation
- IEC for validation
- Field based validation
- Publication of final list (ULB/Ward Offices)











## Identification of left-out and informal workers

**Snowballing**

The respondents were asked to share contact details of their family members and peers who are also involved in core sanitation work

**Closure meetings**

Meetings organized with the community leaders/key sanitation workers/ ULB Officials to identify left out workers

**SMS to respondents**

SMS to respondents for spreading word to others to request for enumeration if they are left out

## Post Survey Process Flow

- Publication of draft list
- Desk validation
- IEC for validation
- Field based validation
- Publication of final list (ULB/Ward Offices)









garima

26

## Complete mechanization of work



Hydrovac set



Gully emptier (Suction machine)



Rodding Machine with Flexible Sewer Rods



Cesspool vehicle



Bucket grabbing machine



Hydro jetting machine



Jetting, grabbing, rodding machine (combination)



Bandicoot

garima

1

# ಸಫಾಯಿ ಕರ್ಮಚಾರಿಗಳು ಕಡ್ಡಾಯವಾಗಿ ಬಳಸಬೇಕಾದ ಪರಿಕರಗಳು
















**ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ**

ದಕ್ಷಿಣ ವಿಂಗ್, ನೆಲ ಮಹಡಿ, ಸಿಲ್ವರ್ ಜ್ಯುಬಿಲಿ ಬ್ಲಾಕ್, ಪಾರ್ಟ್ ಆಫ್ ಯುನಿಟಿ ಬಿಲ್ಡಿಂಗ್ ಕಾಂಪ್ಲೆಕ್ಸ್
ನಂ.1/14, ಮಿಷನ್ ರೋಡ್, ಬೆಂಗಳೂರು–27
ದೂರವಾಣಿ : 080–22240445/6
ವೆಬ್‌ಸೈಟ್ : www.skc.karnataka.gov.in ಇ–ಮೇಲ್ : ksskcb@gmail.com

**Karnataka State Commission for Safai Karmacharis**

No.1/14, Southern Wing, Ground Floor, Silver Jublee Block, Part of
Unity Building Complex, Mission Road, Bangalore - 27
Website : www.skc.karnataka.gov.in E-mail : ksskcb@gmail.com